# ಸಿಂಗಪುರದಲ್ಲಿ ಆಶಿಕಾ!

ಚಂದನವನದ ಬೆಡಗಿಯರೆಲ್ಲ ಲಾಕ್‌ಡೌನ್ ಸಮಯದಲ್ಲಿ ಒಪ್ಪಿಕೊಂಡ ಸಿನಿಮಾಗಳನ್ನು ಮುಗಿಸಲು ಪರದಾಡುತ್ತ ಸೆಟ್‌ನಿಂದ ಸೆಟ್‌ಗೆ ಅಲೆದಾಡುತ್ತಿದ್ದರೆ, ಆಶಿಕಾ ರಂಗನಾಥ್ ಮಾತ್ರ ಪ್ರವಾಸದ ಮೂಡಲ್ಲಿದ್ದಾರೆ. ಇತ್ತೀಚೆಗೆ ಸಿಂಗಪುರದಲ್ಲಿರುವ ಚಿತ್ರಗಳನ್ನು ಅವರೇ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

'ಕೋಟಿಗೊಬ್ಬ 3' ಸಿನಿಮಾದಲ್ಲಿ ಸುದೀಪ್ ಜೊತೆ ಮೈಚಳಿಬಿಟ್ಟು ನರ್ತಿಸಿದ್ದ ಅವರು ನಾಯಕಿಯಾಗಿ ನಟಿಸಿದ್ದ 'ಮದಗಜ', 'ಅವತಾರ ಪುರುಷ' 'ಗರುಡ' ಸಿನಿಮಾಗಳು ಕೂಡ ಇದೇ ವರ್ಷ ಬಿಡುಗಡೆಯಾಗಿತ್ತು. ಹೀಗೆ ಬ್ಯಾಕ್ ಟು ಬ್ಯಾಕ್ ತೆರೆಯ ಮೇಲೆ ಕಾಣಿಸಿಕೊಂಡಿರುವ ಅವರೀಗ ಸಣ್ಣ ಬ್ರೇಕ್ ತೆಗೆದುಕೊಳ್ಳುವ ಸಿದ್ಧತೆಯಲ್ಲಿರುವಂತಿದೆ. ಹಾಗೆ ನೋಡಿದರೆ ಆಶಿಕಾ ಕೈಯಲ್ಲೀಗ ವಿಪರೀತ ಅವಕಾಶಗಳೇನೂ ಇಲ್ಲ. ಪವನ್ ಒಡೆಯರ್ ನಿರ್ದೇಶನ 'ರೆಮೊ' ಸಿನಿಮಾ ಇದೇ ವರ್ಷದ ಅಂತ್ಯದಲ್ಲಿ ತೆರೆಕಾಣುವ ನಿರೀಕ್ಷೆ ಇದೆ. ಇತ್ತೀಚೆಗಷ್ಟೆ ಸುನಿ ನಿರ್ದೇಶನದ 'ಗತವೈಭವ' ಸಿನಿಮಾದಲ್ಲಿ ದೇವಕನ್ಯೆಯಾಗಿ ಕಾಣಿಸಿಕೊಂಡಿರುವ ಅವರ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಆ ಚಿತ್ರದ ಚಿತ್ರೀಕರಣದಲ್ಲಿ ಅವರು ಬ್ಯುಸಿಯಾಗಲಿದ್ದಾರೆ. ■



# ಹದಿಹರೆಯದ ಹೊಸ ಹಾಡು!



'ಕಸ್ತೂರಿ ನಿವಾಸ' ಸಿನಿಮಾದ 'ನೀ ಬಂದು ನಿಂತಾಗ' ಹಾಡು ಯಾರಿಗೆ ಇಷ್ಟವಿಲ್ಲ. ಕೇಳಿದಾಗೆಲ್ಲ ಖುಷಿಯ ಬುಗ್ಗೆ ಎದೆಯಲ್ಲಿ ಉಕ್ಕಿಸುವಷ್ಟು ಜೀವಂತಿಕೆಯನ್ನು ಇಂದಿಗೂ ಉಳಿಸಿಕೊಂಡಿರುವ ಹಾಡದು. ಆ ಹಾಡಿನ ಸಾಲೊಂದನ್ನು ಇಟ್ಟುಕೊಂಡು ಹದಿಹರೆಯದವರ ಬದುಕಿನ ಕಥೆಯನ್ನು ಹೇಳಲು ಹೊರಟಿದೆ ಗಾಂಧಿನಗರದಲ್ಲೊಂದು ಚಿತ್ರತಂಡ. ಅವರು ತಮ್ಮ ಸಿನಿಮಾಗೆ ಇಟ್ಟುಕೊಂಡಿರುವ ಹೆಸರು 'ವಾಸಂತಿ ನಲಿದಾಗ'.

ಇದೊಂದು ಪಕ್ಕಾ ಹದಿಹರೆಯದ ಲವ್ ಸ್ಟೋರಿಯಂತೆ. ಟೈಟಲ್ ಮೂಲಕವೇ ನಾಸ್ಟಾಲ್ಜಿಕ್ ಫೀಲ್‌ಗೆ ಕರೆದುಕೊಂಡು ಹೋಗುವ ಈ ಸಿನಿಮಾದ ಕಥೆ ಮಾತ್ರ ಇಂದಿನ ಹದಿಹರೆಯದವರ ಹಾಡು ಪಾಡನ್ನು ಒಳಗೊಂಡಿದೆಯಂತೆ. ಅಂದಹಾಗೆ, ಈ ಚಿತ್ರದ 'ಕೇಳ್ರಪ್ಪೋ ಕೇಳಿ' ಎಂಬ ಹಾಡೊಂದು ಇತ್ತೀಚೆಗಷ್ಟೇ ಬಿಡುಗಡೆಯಾಗಿ ಸೋಷಿಯಲ್ ಮೀಡಿಯಾಗಳಲ್ಲಿ ಮೆಚ್ಚುಗೆಯನ್ನೂ ಪಡೆದಿದೆ.

ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ತೊಡಗಿಕೊಂಡಿರುವ ಚಿತ್ರತಂಡವು, ಚಿತ್ರವನ್ನು ಸೆಪ್ಟೆಂಬರ್‌ನಲ್ಲಿ ತೆರೆಗೆ ತರುವ ಸಿದ್ಧತೆಯಲ್ಲಿದೆ. ಹಾಗಾಗಿ ಈಗಿನಿಂದಲೇ ಪ್ರಚಾರಕಾರ್ಯವನ್ನು ಆರಂಭಿಸಿದೆ. ಅದರ ಭಾಗವಾಗಿಯೇ ಹಾಡನ್ನು ಬಿಡುಗಡೆ ಮಾಡಿದೆ. ಈ ಹಾಡನ್ನು ಗೌಸ್‌ಪೀರ್ ಬರೆದಿದ್ದಾರೆ. ಶ್ರೀ ಗುರು ಸಂಗೀತ ನಿರ್ದೇಶನ ಮಾಡಿದ್ದಾರೆ.

ರವೀಂದ್ರ ವಂಶಿ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾಗೆ ಕೆ.ಎನ್. ಶ್ರೀಧರ್ ಹಣ ಹೂಡಿದ್ದಾರೆ. ಮುಖ್ಯ ಪಾತ್ರಗಳಲ್ಲಿ ಹಲವು ಹೊಸ ಪ್ರತಿಭೆಗಳನ್ನು ಪರಿಚಯಿಸುತ್ತಿರುವ ಈ ಸಿನಿಮಾದಲ್ಲಿ, ಸಾಯಿಕುಮಾರ್, ಸುಧಾರಾಣಿ, ಸಾಧುಕೋಕಿಲ ಅವರಂಥ ಅನುಭವಿ ನಟರೂ ಇದ್ದಾರೆ. ■